ದಾಳಕ್ಕಿಳಿಯಿತು. ತನ್ನ ಹುಡುಗಿ ಋತುವಿಗಾಗಿ ಅವನು ಅತ್ತಿತ್ತ ಕಣ್ಣಾಡಿಸಿದ.

ಪುರುಷೋತ್ತಮರು ಅವನನ್ನು ನಡುಹಾಲಿಗೆ ಕರೆದೊಯ್ದು ಅಲ್ಲಿದ್ದ ದಿವಾನದಲ್ಲಿ ಅವನನ್ನು ಕುಳ್ಳಿರಿಸಿ ತಾವೂ ಅವನಿಗೆದುರಾಗಿ ಕುಳಿತರು.

ಅಷ್ಟರಲ್ಲಿ ಕಲಾವತಿಯೂ ಋತು, ರಮ್ಯರೊಂದಿಗೆ ನಡುಹಾಲಿಗೆ ಬಂದರು. ಅವರೂ ಹೇಮಂತನನ್ನು ದಿಟ್ಟಿಸಿದರು. ಮೆಚ್ಚುಗೆ ಅವರ ಕಂಗಳಲ್ಲಿ ಮೂಡಿತು. ಋತುವಿನ ಆಯ್ಕೆ ಬಹಳ ಸಮಂಜಸವಾಗಿದೆಯೆನಿಸಿತು.

ಪುರುಷೋತ್ತಮರು ಮಡದಿಯನ್ನು ಹೇಮಂತನಿಗೆ ಪರಿಚಯಿಸಿ ಕೊಟ್ಟಾಗ ಅವನು ಪ್ರತಿಯಾಗಿ ಕೈ ಮುಗಿದನು. ಅವನ ದೃಷ್ಟಿ ಒಂದು ಕ್ಷಣ ಋತುವಿನತ್ತ ನಿಂತು ನಂತರ ರಮ್ಯಾಳತ್ತ ಹರಿಯಿತು.

'ಅಂತೂ ನಿಮ್ಮ ಫ್ರೆಂಡನ್ನು ನೀವು ಬಿಟ್ಟಿರಲ್ಲ ಅಂತ ನಂಗೆ ಗೊತ್ತಾಯ್ತು ಬಿಡಿ, ಋತುವನ್ನು ಮದ್ವೆಯಾದ ಮೇಲೆ ನನ್ನ ಪಾಡನ್ನು ನೆನೆಸಿಕೊಂಡ್ರೆ ನಂಗೆ ಭಯವಾಗ್ತಿದೆ..'

ಅವನ ಹಾಸ್ಯಕ್ಕೆ ಎಲ್ಲರೂ ಮನಸಾರೆ ನಕ್ಕರು. ಎಲ್ಲರೂ ಕುಳಿತುಕೊಂಡ ಮೇಲೆ ಸುಂದರಿ ಬಿಸಿ ಬಾದಾಮಿ ಹಾಲಿನ ಲೋಟಗಳೊಂದಿಗೆ ಹಾಜರಾದಳು. ದೇವರಿಗೆ ನೈವೇದ್ಯಕ್ಕಿಟ್ಟಿದ್ದ ಹಾಲನ್ನು ಬೆಕ್ಕು ಬೀಳಿಸಿದ್ದನ್ನು ಸದ್ಯಕ್ಕೆ ಮರೆತು ಎಲ್ಲರೂ ಹೇಮಂತನತ್ತ ಆಸಕ್ತಿ ವಹಿಸಿದರು.

'ಈ ಚಳಿಗೆ ಬಾದಾಮಿ ಹಾಲು ತುಂಬಾ ಚೆನ್ನಾಗಿದೆ..' ಹೊಗಳುತ್ತಲೇ ಹಾಲಿನ ಲೋಟವನ್ನು ಖಾಲಿ ಮಾಡಿದ ಹೇಮಂತ. ಅವನ ಸ್ನೇಹಪರತೆ ಎಲ್ಲರಿಗೂ ಹಿಡಿಸಿತು.

ಹೇಮಂತನ ಚುರುಕು ದೃಷ್ಟಿಗೆ ಅಕ್ವೇರಿಯಂನ ಮುಂದೆ ಕುಳಿತು ಬಣ್ಣಬಣ್ಣದ ಮೀನುಗಳನ್ನು ನೋಡುತ್ತಿದ್ದ ಭರತನು ಬಿದ್ದನು. ಮೇಲೆದ್ದವನು ಭರತನನ್ನು ಮಾತನಾಡಿಸಲು ಸಮೀಪಿಸಿದಾಗ ನಿರ್ವಾಹವಿಲ್ಲದೆ ಪುರುಷೋತ್ತಮರೂ ಮೇಲೇಳಲೇ ಬೇಕಾಯಿತು.

ಹೇಮಂತ ಅವನನ್ನು ಮಾತನಾಡಿಸಲು ಯತ್ನಿಸತೊಡಗಿದಾಗ ಪುರುಷೋತ್ತಮರೇ ಬಾಯ್ತೆರೆದರು. 'ಹೇಮಂತ್, ಅವ್ನು ನಮ್ಮ ಮಗ ಭರತ, ನೀನು ಏನು ಕೇಳಿದ್ರೂ ಅವ್ನು ಉತ್ತರ ಕೊಡಲ್ಲಪ್ಪಾ, ಎರಡು ವರ್ಷಗಳಿಂದ ಅವನು ಯಾರೊಂದಿಗೂ ಯಾವ ಮಾತನ್ನೂ ಆಡಿಲ್ಲ, ಪಿ.ಯು.ಸಿ ಮುಗಿಯುವ ವರೆಗೂ ನಾರ್ಮಲ್ಲಾಗಿಯೇ ಇದ್ದ ಹುಡುಗ ಬಳ್ಳಾರಿಯ ಎಂಜಿನಿಯರಿಂಗ್ ಕಾಲೇಜಿಗೆ ಸೇರಿದ ಮೇಲೆ ಹೀಗಾಗಿ ಹೋದ. ಎಷ್ಟೋ ಟ್ರೀಟ್‌ಮೆಂಟ್‌ಗಳಾದ್ವು, ಆದ್ರೆ ನಮ್ಮ ಭರತ ಮೊದಲಿನಂತಾಗ್ಲಿಲ್ಲ, ನೀನು ಈ ಬಂಗಲೆಯ ಅಳಿಯನಾಗುವವನು, ನಿಂಗೆ ಈ ವಿಷ್ಯವೆಲ್ಲಾ ತಿಳಿದಿದ್ರೆ ಒಳ್ಳೇದೇ..' ಪುರುಷೋತ್ತಮರ ವ್ಯಥೆ ಹೇಮಂತನಿಗೆ ಕೆಡುಕೆನಿಸಿತು.

ಮತ್ತೆ ಎಲ್ಲರೂ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತರು. ಅವರ ಮಾತುಗಳಲ್ಲಿ ಹೆಚ್ಚಿನ ಭಾಗವು ಬೆಂಗಳೂರಿನಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಅಪರಾಧದ ಸುತ್ತಲೂ ಸುತ್ತತೊಡಗಿತ್ತು.

'ಜನ ವಿದ್ಯಾವಂತರಾದ್ರೆ ಅಪರಾಧಗಳು ಕಡಿಮೆಯಾಗುತ್ತೆ ಅನ್ನೋ ನಂಬಿಕೆ ಮೊದಲೆಲ್ಲಾ ಇತ್ತು ಹೇಮಂತ್....ಆದ್ರೀಗ ವಿದ್ಯಾವಂತರಲ್ಲೇ ಅಪರಾಧ ಪ್ರಕರಣಗಳು ಹೆಚ್ಚಿವೆ. ಮೊದಲೆಲ್ಲಾ ಸಿನಿಮಾ, ಕಾದಂಬರಿಗಳಲ್ಲಿ ಕೊಲೆ, ಅತ್ಯಾಚಾರ ಮುಂತಾದವುಗಳನ್ನು ನೋಡ್ತಿದ್ವಿ, ಈಗಂತೂ ಇವೆಲ್ಲಾ ದಿನನಿತ್ಯದ ಪ್ರಕರಣಗಳಂತೆ ನಡೀತಿದೆ, ಒಂದು ಕಡೆ ಆರು ತಿಂಗಳ ಹಸುಳೆಯ ಮೇಲೆ ಅತ್ಯಾಚಾರ ನಡೆದ್ರೆ, ಮತ್ತೊಂದು ಕಡೆ ಹೆಂಡತಿಯೇ ಗಂಡನನ್ನು ಮುಗಿಸಲು ಸುಫಾರಿ ಕೊಟ್ಟಿರ್ತಾಳೆ. ಈ ಅಪರಾಧಗಳು ದಿನೇ ದಿನೇ ಹೆಚ್ಚುತ್ತಿರುವುದನ್ನು ನೋಡ್ತಿದ್ರೆ ಭಯವಾಗುತ್ತೆ, ಇಲ್ಲಿ ಯಾರಿಗೆ ಕೆಲಸವಿಲ್ಲದಿದ್ರೂ ಇರ್ಬಹುದು, ಆದ್ರೆ ಪೊಲೀಸ್ ಡಿಪಾರ್ಟ್‌ಮೆಂಟಿಗೆ, ನನ್ನಂಥ ಲಾಯರುಗಳಿಗೆ, ನಿನ್ನಂಥ ಪತ್ರೆದಾರರಿಗೆ ಕೈ ತುಂಬಾ ಕೆಲಸ...' ಪುರುಷೋತ್ತಮರ ಮಾತುಗಳು ಇಂದಿನ ವಾಸ್ತವದ ಸ್ಥಿತಿಗೆ ಕನ್ನಡಿ ಹಿಡಿದಿತ್ತು.

ಎಲ್ಲರೂ ಮಾತುಕತೆಯಲ್ಲಿ ಮುಳುಗಿದ್ದರೆ ಋತು ಮಾತ್ರ ತನ್ನ ಹೇಮಂತನನ್ನೇ ಆಗಾಗ ನೋಡುತ್ತಿದ್ದಳು. ಎಷ್ಟು ನೋಡಿದರೂ ಅವಳಿಗೆ ತೃಪ್ತಿ ಎನಿಸಲಿಲ್ಲ. ತನ್ನ ಅಲಂಕಾರವನ್ನು ಅವನು ಗಮನಿಸಿರಬಹುದೇ?....ತನ್ನನ್ನೇ ಪ್ರಶ್ನಿಸಿಕೊಂಡಳು.

ಋತುವಿನ ಈ ತೊಳಲಾಟವನ್ನು ಸೂಕ್ಷ್ಮವಾಗಿ ಗಮನಿಸಿದರು ಕಲಾವತಿ. ಅವಳೀಗ ಹೇಮಂತನ ಸಾಮಿಪ್ಯವನ್ನು ಬಯಸುವುದು ಸಹಜವೇ.. ದಕ್ಕೀಗ ತಾವು ಅವಕಾಶವನ್ನು ಮಾಡಿಕೊಡಬೇಕೆನಿಸಿತು.

'ಬರಿಯ ಮಾತುಗಳೇ ಆಯ್ತು, ಋತು....ಹೇಮಂತನನ್ನು ಕರೆದುಕೊಂಡು ಹೋಗಿ ಬಂಗಲೆಯ ಪೂರ್ತಿ ಸುತ್ತಾಡಿಸಿಕೊಂಡು ಬಾ...ಅಷ್ಟರಲ್ಲಿ ನಾವು ಊಟಕ್ಕೆ ಸಿದ್ಧ ಮಾಡಿರ್ತೀವಿ....'

ಕಲಾವತಿಯೆಂದಾಗ ಪುರುಷೋತ್ತಮರೂ ಆಕೆಯ ಮಾತನ್ನು ಅನುಮೋದಿಸಿದರು.

ಋತು ಕುಣಿಯುವ ನಡಿಗೆಯಲ್ಲೇ ತಮ್ಮ ಬಂಗಲೆಯ ಪೂರ್ತಿ ಪರಿಚಯ ಮಾಡಿಕೊಟ್ಟಳು. ಇಬ್ಬರೂ ಟೆರೇಸಿಗೆ ಬಂದರು. ಅಲ್ಲಿನ ದೃಶ್ಯವನ್ನು ನೋಡಿ ಹೇಮಂತನ ಕಣ್ಣುಗಳು ಆಶ್ಚರ್ಯದಿಂದ ಅಗಲವಾದವು...!

11

ಕೋಟೆಯ ಮೇಲೆ ನಿಂತಂತಹ ಅನುಭವ ಈಗ ಅವನಿಗಾಗತೊಡಗಿತ್ತು. ಅಲ್ಲಿಂದ ನಗರದ ಮಿಣುಕು ದೀಪಗಳು ಚಿತ್ತಾಕರ್ಷಕವಾಗಿ ಕಂಡರೆ, ಕೋಟೆಯ ಬುರುಜಿನಂತಹ ಕಡೆಯಿಂದ ಕೆರೆಯ ಒಂದು ಭಾಗವನ್ನು ನೋಡಬಹುದಿತ್ತು. ಕೆರೆಯ ಕಡೆಯಿಂದ ತಂಪುಗಾಳಿ ಬೀಸತೊಡಗಿತ್ತು. ಟೆರೇಸಿನ ಮಧ್ಯಭಾಗದಲ್ಲಿ ಕಲಾತ್ಮಕವಾಗಿ ಲತಾಮಂಟಪವೊಂದನ್ನು ನಿರ್ಮಿಸಲಾಗಿತ್ತು. ಲತಾಮಂಟಪದೊಳಗೆ ಕುಳಿತುಕೊಳ್ಳಲು ಕಲ್ಲಿನ ಆಸನಗಳ ವ್ಯವಸ್ಥೆಯಿತ್ತು. ಸುತ್ತಲೂ ನಾನಾ ವಿಧದ ಹೂ ಕುಂಡಗಳನ್ನು ಬೆಳೆಸಲಾಗಿತ್ತು. ಒಂದು ನೀಲಿ ದೀಪ ಆ ಸೊಬಗನ್ನು ಪ್ರತಿಫಲಿಸುತ್ತಿತ್ತು.

ಅಂಥ ಮಾದಕ ವಾತಾವರಣದಲ್ಲಿ ತನ್ನ ಹುಡುಗಿಯತ್ತ ನೋಡಿದ ಹೇಮಂತ. ಎಲ್ಲರ ಮುಂದೆ ರೇಷ್ಮೆ ಸೀರೆಯುಟ್ಟ ಅವಳ ಸೌಂದರ್ಯವನ್ನು ಸರಿಯಾಗಿ ನೋಡಲಾಗಿರಲಿಲ್ಲ. ಸುಂದರವಾದ ಹೂ ಗಿಡಗಳ ನಡುವೆ ಹಸಿರು ರೇಷ್ಮೆ ಸೀರೆಯುಟ್ಟ ಅವಳು ಮೋಹದ ಪುತ್ತಳಿಯಂತೆ ಕಂಡಳು ಅವನ ಕಂಗಳಿಗೆ. ತನಗಾಗಿಯೇ ತಪಸ್ಸು ಮಾಡಿದ್ದ ಹುಡುಗಿ. ಕೋಟೆ ಬಂಗಲೆಯ ರಾಜಕುಮಾರಿ....ಅವಳು ಮನಸ್ಸು ಮಾಡಿದ್ದರೆ ಎಂಥ ರಾಜಕುಮಾರನನ್ನು ಬೇಕಾದರೂ ಮದುವೆಯಾಗಬಹುದಿತ್ತು. ಆದರೆ ತನಗಾಗಿ, ತನ್ನ ಪ್ರೀತಿಗಾಗಿ ಯಾವ ಭರವಸೆಯೂ ಇಲ್ಲದೆ ಇಷ್ಟು ವರ್ಷ ಕಾದಳು. ಈ ಮುಗ್ಧೆಗೆ ತಕ್ಕ ಜೊತೆಗಾರ ತಾನಾದರೆ ಸಾಕೆನಿಸಿತು ಅವನಿಗೆ.

ಅವಳತ್ತ ಸರಿದು ಅವಳನ್ನಪ್ಪಿದ. ಅವಳಿಗೂ ಮಾತುಗಳು ಬೇಕೆನಿಸಲಿಲ್ಲ. ಅವನ ಸ್ಪರ್ಶ, ಸಾಮಿಪ್ಯ ಸಾವಿರ ಮಾತುಗಳನ್ನು ಒಟ್ಟಿಗೆ ಆಡಿತ್ತು. ಅವನನ್ನು ಗಾಢವಾಗಿ ಅಪ್ಪಿ, ಅವನ ಹರವಾದ ಎದೆಯಲ್ಲಿ ಮುಖವಿರಿಸಿದಳು. ಉದ್ವೇಗದಿಂದ ಕಂಪಿಸುತ್ತಿದ್ದ ಅವಳ ಮುಖವನ್ನೆತ್ತಿ ಹೇಮಂತ ಅವನ ತುಂಬುಗೆನ್ನೆಯ ಮೇಲೆ ಪ್ರೇಮದ ಮುದ್ರೆಯೊತ್ತಿದ. ಋತುವೂ ಅದಕ್ಕೆ ಪ್ರತಿಯಾಗಿ ಮತ್ತೊಂದು ಚುಂಬನ ನೀಡುವುದರಲ್ಲಿದ್ದಳು.

ಅಷ್ಟರಲ್ಲಿ.... ಯಾರೋ ಜೋರಾಗಿ ಸೀನಿದಂತಾದಾಗ ಇಬ್ಬರೂ ಬೆಚ್ಚಿದರು.. ಈ ಟೆರೇಸಿನಲ್ಲಿ ತಾವಿಬ್ಬರಲ್ಲದೆ ಮತ್ತಾರೋ ಇದ್ದಾರೆ....!

ತಕ್ಷಣ ಜಾಗ್ರತನಾದ ಹೇಮಂತ ಸೀನಿದ ಶಬ್ದ ಬಂದತ್ತ ಓಡಿದ್ದ. ಋತುವೂ ಅವನನ್ನು ಹಿಂಬಾಲಿಸಿದಳು. ಅವರ ಅನಿಸಿಕೆ ಸುಳ್ಳಾಗಿರಲಿಲ್ಲ. ಅದುವರೆಗೆ ಟೆರೇಸಿನ ಮೂಲೆಯಲ್ಲಿ ನಿಂತಿದ್ದ ವ್ಯಕ್ತಿಯೊಂದು ದೌಡಾಯಿಸಿ ಓಡತೊಡಗಿತು. ಮೂಲೆಯಲ್ಲಿ ಕತ್ತಲಿದ್ದುದರಿಂದ ಅದು ಯಾರೆಂದು ತಿಳಿಯಲೂ ಸಾಧ್ಯವಿರಲಿಲ್ಲ. ಹಾಗೆ ಓಡಿದ ವ್ಯಕ್ತಿ ಹೊರಗಿನ ಮೆಟ್ಟಿಲಿಳಿದು ಓಡಿ ಮರೆಯಾಯಿತು.

ಹೇಮಂತ ಟೆರೇಸಿನ ಮೇಲೆಯೇ ನಿಂತು ಆ ವ್ಯಕ್ತಿ ಎಲ್ಲಾದರೂ ಕಾಣುತ್ತದೆಯೇ ಎಂದು ಸುತ್ತಲೂ ನೋಡಿದ. ಆದರೆ ಆ ವ್ಯಕ್ತಿ ಮತ್ತೆ ಕಾಣಲೇ ಇಲ್ಲ. ಬಂಗಲೆಯ ಒಳಭಾಗದಿಂದ ಮೆಟ್ಟಿಲಿರುವಂತೆಯೇ ಹೊರಭಾಗ

## ಸ್ವ ಸಮಾಧಾನ

ಗಿಡದ ಎಲೆ
ಉದುರುವಾಗಲೆಲ್ಲ
ಸಾವು ನೆನಪಾದರೆ
ಅದು ಆಕಸ್ಮಿಕವಷ್ಟೆ
ಎಂದು ಮತ್ತೆ ಮತ್ತೆ
ಸಮಾಧಾನಗೊಳ್ಳುವೆ

★ ಮೇಟಿ ಕೊಟ್ರಪ್ಪ

